ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶ್ರೀರಂಗಪಟ್ಟಣ
ಸಿಸಿಃ ನಂಃ **1112/2021**

ಪಿ.ಡಬ್ಲ್ಯೂಃ **06**
ಸಿ.ಡಬ್ಲ್ಯೂಃ **06**

| | |
|---|---|
| ಸಾಕ್ಷಿಯ ಹೆಸರು | ಗೌರಿ |
| ತಂದೆ/ಗಂಡನ ಹೆಸರು | ವಾಸು |
| ವಯಸ್ಸು | 43 ವರ್ಷ |
| ಉದ್ಯೋಗ | ನಿರ್ವಾಹಕರು, ಮದ್ದೂರು |
| ವಿಳಾಸ | ಮದ್ದೂರು ಗ್ರಾಮ |

ಸಾಕ್ಷಿಗೆ ದಿನಾಂಕ **24.09.2025** ರಂದು ಪ್ರಮಾಣವಚನ ನೀಡಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ ಸ ಅ ರವರಿಂದಃ

ಆರೋಪಿ ಗೊತ್ತು.

ದಿ.**02.04.2021** ರಂದು ನಾನು ಮತ್ತು ಆರೋಪಿ ಮಾರ್ಗ ಸಂಖ್ಯೆ **97** ತುಮಕೂರು-ಮೈಸೂರು ಆಗಿದ್ದು ಕೆ.ಎಸ್.ಆರ್.ಟಿ.ಸಿ ಬಸ್ ಸಂಖ್ಯೆ ಕೆಎ-**11**-ಎಫ್-**0414** ಆಗಿದ್ದು ಸಂಜೆ ಕೊನೆಯ ಟ್ರಿಪ್ ಆಗಿದ್ದು ಮೈಸೂರಿನಿಂದ ಮದ್ದೂರಿಗೆ ನಿಲುಗಡೆಗಾಗಿ ಹೋಗುತ್ತಿದ್ದಾಗ ಸಂಜೆ **6.00** ಗಂಟೆ ವೇಳೆ ಶ್ರೀರಂಗಪಟ್ಟಣ ಮುಖ್ಯ ರಸ್ತೆಯ ವಿನಾಯಕ ವೈನ್ ಸ್ಟೋರ್ ಬಳಿ ಚಾಲಕ ತಕ್ಷಣ ಬ್ರೇಕ್ ಹಾಕಿದ್ದು ಜನರು ಬಂದಿದ್ದು ಏನಾಯಿತು ಎಂದು ನಾನು ಬಸ್ ನಿಂದ ಇಳಿದು ಹೋಗಿ ನೋಡಿದೆನು ಆಗ ಕಾರೊಂದು ಡಿವೈಡರ್ ಮೇಲೆ ಹತ್ತಿದ್ದು ಪಕ್ಕದಲ್ಲಿ ನಮ್ಮ ಬಸ್ ನಿಂತಿರುತ್ತದೆ. ತಕ್ಷಣ ಶ್ರೀರಂಗಪಟ್ಟಣದ ಕೆ.ಎಸ್.ಆರ್.ಟಿ.ಸಿ ಸಂಚಾರಿ ನಿರ್ವಾಹಕರಿಗೆ ವಿಷಯ ತಿಳಿಸಿದ್ದು ಅವರು ಸ್ಥಳಕ್ಕೆ ಬಂದಿರುತ್ತಾರೆ. ನಂತರ ನಮ್ಮ ಕೆ.ಎಸ್.ಆರ್.ಟಿ.ಸಿ ಬಸ್ ನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ. ನಂತರ ನಾನು ಮತ್ತು ಚಾಲಕ ಠಾಣೆಗೆ ಹೋಗಿರುತ್ತೇವೆ. ಅಪಘಾತ ಯಾರ ತಪ್ಪಿನಿಂದ ಹೇಗೆ ಆಗಿರುತ್ತದೆ ಎಂದು ನಾನು ನೋಡಿರುವುದಿಲ್ಲ. ನಾನು ಈ ಬಗ್ಗೆ ಪೋಲಿಸರಿಗೆ ಇದೇರೀತಿ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ನಿಪಿ **4** ರಿಂದ **7** ರ ತೋರಿಸಲಾಗಿ ಬಸ್ಸು ಮತ್ತು ಕಾರನ್ನು ನೋಡಿ ಗುರುತಿಸಿರುತ್ತಾರೆ.

(ಸಾಕ್ಷಿಯನ್ನು ಮಾನ್ಯ ಸ ಸ ಅ ರವರ ಕೋರಿಕೆಯ ಮೇರೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು).

ಪಾಟೀ ಸವಾಲು ಃ ಮಾನ್ಯ ಸ ಸ ಅ ರವರಿಂದ ಃ

ಆರೋಪಿ ಚಾಲಕ ಬಸ್ಸನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿ ಬಸ್ಸನ್ನು ಬಲಭಾಗಕ್ಕೆ ತೆಗೆದುಕೊಂಡ ಕಾರಣ ಕಾರಿನ ಚಾಲಕ ಬಂದು ಡಿಕ್ಕಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಚಾ ಸಾ 1 ಮತ್ತು 4 ರವರು ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಯಾರೋ ಇಬ್ಬರು ಪ್ರಯಾಣ ಮಾಡುತ್ತಿದ್ದರು ಅವರ ಹೆಸರು ನನಗೆ ತಿಳಿದಿಲ್ಲ. ಚಾ ಸಾ 1 ರವರಿಗೆ ಮೂಗು ಮತ್ತು ಬಾಯಿಗೆ, ಚಾ ಸಾ 4 ರವರ ತಲೆಯ ಎಡಭಾಗಕ್ಕೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ಗಾಯಾಳುಗಳನ್ನು ನಾನು ಶ್ರೀರಂಗಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ ಯಾವುದೇ ಪೆಟ್ಟುಗಳು ಆಗಿರಲಿಲ್ಲ ಎಂದು ನುಡಿಯುತ್ತಾರೆ. ಈ ಬಗ್ಗೆ ಚಾ ಸಾ 1 ರವರು ದೂರು ನೀಡಿರುತ್ತಾರೆ ಎಂದು ನನಗೆ ತಿಳಿದಿರುತ್ತದೆ ಎಂದರೆ ಸರಿ.

ಸಾಕ್ಷಿ ದಿ.03.04.2021 ರಂದು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಹೇಳಿಕೆಯನ್ನು ಓದಿ ಹೇಳಲಾಗಿ ನಿರಾಕರಿಸಿದ ಹಿನ್ನೆಲೆಯಲ್ಲಿ ಹೇಳಿಕೆಯನ್ನು ನಿಪಿ 8 ಎಂದು ಗುರುತಿಸಲಾಯಿತು. ಮುಂದುವರೆದು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ 8 ಎ ಎಂದು ಗುರುತಿಸಲಾಯಿತು.

ನನಗೆ ಎಲ್ಲಾ ಅಂಶಗಳು ತಿಳಿದಿದ್ದರೂ ಆರೋಪಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಪರ ವಕೀಲರಿಂದ ಪಾಟೀಸವಾಲು ಇರುವುದಿಲ್ಲ.

ಮರು ವಿಚಾರಣೆ ಇಲ್ಲಃ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ